## ಚುಕ್ಕೆ, ಹೂ, ಬೆಟ್ಟ, ನದಿ

ಬಾನಲಿ ಮಿನುಗುವ ಚುಕ್ಕೆಗಳೆಲ್ಲಾ
ಚಂದದ ಹೆಸರಲಿ ನಗುತಿವೆಯಲ್ಲಾ
ಅಶ್ವಿನಿ ಭರಣಿ ರೇವತಿ ರೋಹಿಣಿ
ಪುಷ್ಯ ಚಿತ್ರಾ ಹಸ್ತಾ ಫಲ್ಗುಣಿ

ಗಿಡಮರ ಬಳ್ಳಿಯ ಬಣ್ಣದ ಹೂಗಳು
ಘಮ್ಮನೆ ಪರಿಮಳ ಸೂಸುತಿವೆ
ಮಲ್ಲಿಗೆ ಮಂದಾರ ಜಾಜಿ ಪಾರಿಜಾತ
ನೈದಿಲೆ ಗುಲಾಬಿ ಸಂಪಿಗೆ ಕೇದಿಗೆ

ಬೆಟ್ಟದಿ ಹುಟ್ಟಿ ಬಯಲಲಿ ಹರಿಯುವ
ನದಿಗಳೆ ಬದುಕಿಗೆ ಆಸರೆ ನೋಡಿ
ಕಾಳಿ ಕಾವೇರಿ ಕೃಷ್ಣಾ ತುಂಗಾ
ವರದ ವರಾಹಿ ಚಕ್ರಾ ನೇತ್ರಾ

ಎತ್ತರ ನಿಂದು ಮೋಡವ ತಡೆದು
ಝರಿ ನದಿ ಉಗಮದ ಮೂಲವು ಬೆಟ್ಟವು
ನಂದಿ ಚಾಮುಂಡಿ ಶಿವಗಂಗೆ ಮಧುಗಿರಿ
ನರಿಮಲೆ ನೃಪತುಂಗ ಕುಂದಾದ್ರಿ ಬಿಳಿಗಿ

ಜೊತೆ ಜೊತೆ ಇದ್ದರೂ ಸ್ಪರ್ಧೆಗೆ ಬಿದ್ದು
ಬಾನಿಗೆ ತೋಳನು ಚಾಚುತ ಆಡಿವೆ
ಅತ್ತಿ ಅರಳಿ ಆಲ ಸಾಲ
ಮತ್ತಿ ಹೊನ್ನೆ ಬಗನಿ ತೇಗ

ಹಾರುತ ಬಂದು ಹುಳಪಳ ತಿಂದು
ಮನುಜನ ಜೊತೆಗಿವೆ ಹಕ್ಕಿಗಳು
ಗಿಳಿ ಗೊರವಂಕ ಗುಬ್ಬಿ ಹದ್ದು
ಲಾವಕ್ಕಿ ಹಾವಕ್ಕಿ ಕೋಳಿ ಮುನಿಯ

- ಹಾಡಿನ ನಂತರ ಮಕ್ಕಳು ತಮಗೆ ತಿಳಿದಿರುವ ಇತರ ಹೂಗಳು, ನಕ್ಷತ್ರಗಳು, ಬೆಟ್ಟಗಳು, ನದಿಗಳು, ಹಕ್ಕಿಗಳು, ಪ್ರಾಣಿಗಳು, ಊರುಗಳು, ಹೀಗೆ ಹೆಸರನ್ನು ಹೇಳುತ್ತಾ ಹೋಗಲಿ (ಪಟ್ಟಿ) ಮಾಡಲಿ. ಅವುಗಳನ್ನು ಹೊಂದಿಸಿ ಹಾಡು ಹೇಳಲಿ.
- ಅವುಗಳ ಬಣ್ಣ, ಅವುಗಳಿಗೆ ಸಂಬಂಧಿಸಿದ ಇತರ ವಿವರಗಳನ್ನು ಕುರಿತು ಮಾತನಾಡಲಿ. ಉದಾ. ಆ ನದಿ ಎಲ್ಲಿ ಹರಿಯುತ್ತದೆ, ಎಲ್ಲಿ ಹುಟ್ಟುತ್ತದೆ. ಇಂತಹ ಬೆಟ್ಟ ಎಲ್ಲಿದೆ, ಎಷ್ಟು ಎತ್ತರವಿದೆ, ಅಲ್ಲೇನಿದೆ, ಇತ್ಯಾದಿ.





## ಜೈ ಜೈ ಜೈ

ಭೂಮಿಯ ಉತ್ತಿ ಬೀಜವ ಬಿತ್ತಿ
ತುತ್ತಿನ ಚೀಲವ ಎಲ್ಲರಿಗೀಯಲು
ಗಿಡಮರ ಪೋಷಿಸಿ ಬಿಸಿಲಲಿ ಬೇಯುವ
ರೈತ ಕುಟುಂಬಕೆ ಜೈ ಜೈ ಜೈ

ಗಡಿಯಲಿ ನಡೆದು ಶತ್ರುವ ತಡೆದು
ಯಾವುದೇ ಧಾಳಿಗೂ ಎದೆಯನು ಒಡ್ಡುವ
ಹಗಲೂ ಇರಳೂ ದೇಶವ ಕಾಯುವ
ಸೈನಿಕ ಪಡೆಗೆ ಜೈ ಜೈ ಜೈ

ಅಕ್ಷರ ಕಲಿಸಿ ಜ್ಞಾನವ ಬೆಳೆಸಿ
ಪ್ರಶ್ನಿಸಿ ಚಿಂತಿಸಿ ಉತ್ತರ ಹುಡುಕಿಸಿ
ದೇಶದ ಮನಸನು ಅರಳಿಸಿ ಬೆಳೆಸುವ
ಶಿಕ್ಷಕ ವೃಂದಕೆ ಜೈ ಜೈ ಜೈ

ಶಿಶುಗಳು ಮಕ್ಕಳು ಯುವಜನ ವೃದ್ಧರು
ದೇಹ ಮನಸ್ಸು ಸುಸ್ಥಿತಿಯಿರಲು
ಹಳ್ಳಿ ಪಟ್ಟಣದಿ ಆರೋಗ್ಯ ಕಾಯುವ
ವೈದ್ಯರ ತಂಡಕೆ ಜೈ ಜೈ ಜೈ

- ಹಾಡಿನ ನಂತರ ಮಕ್ಕಳು ತಮಗೆ ತಿಳಿದಿರುವ ಇತರ ವೃತ್ತಿಶೀಲರ ಹೆಸರುಗಳನ್ನು ಪಟ್ಟಿ ಮಾಡಲಿ.
- ಅವರೇನು ಮಾಡುತ್ತಾರೆ, ಅವರಿಂದ ನಮಗೇನು ಸಹಾಯ, ಪ್ರಯೋಜನ ಆಗುತ್ತಿದೆ ಎಂದು ಮಾತನಾಡಲಿ ಸಾಧ್ಯವಾದರೆ ಅವುಗಳನ್ನು ಹೊಂದಿಸಿ ಹಾಡು ಹೇಳಲಿ.

## ತಪ್ಪು ಮಾಡಬೇಡಿ

ತಪ್ಪು ಮಾಡಬೇಡಿ ಅಂತ
ಅಪ್ಪ ಅಮ್ಮ ಹೇಳ್ತಾರೆ
ತಪ್ಪು ಆದ್ರೆ ಮೇಷ್ಟ್ರು ಕೂಡಾ
ಕಣ್‌ಕಣ್ ಬಿಟ್ಟು ನೋಡ್ತಾರೆ

ಮಕ್ಕಳು ಮಾತ್ರ ಅಂಕೇಲಿರ್ಬೇಕು
ಹಕ್ಕಿ ಕೋತಿಗಳಿಗ್ಯಾಕಿಲ್ಲ
ಅವ್ರ ಅಪ್ಪ ಅಮ್ಮ ಯಾವತ್ತೂನು
ಮಕ್ಳನ್ ಹಿಡ್ಕೊಂಡ್ ಹೊಡೆಯಲ್ಲ!

ಅಕ್ಕಿ ಬೇಳೆ ತರ್ಕಾರಿ ಹಾಕಿ
ಅಮ್ಮನ ಬಿಸಿ ಬೇಳೆ ಬಾತು
ಒಂದ್ಸರ್ತೀನೂ ತಪ್ಪಾಗಲ್ವ?
ತಿಂದ್ಬಿಟ್ ನಾವು ಸುಮ್ನಿರಲ್ವ?

ಅಪ್ಪ ಹೇಳೋ ಕತೆನಲ್ಲಿ
ರಾಮಾಯಣ್ದಲ್ಲಿ ಭೀಮ ಬರಲ್ವ
ಮೇಷ್ಟ್ರು ಚರಿತ್ರೆ ಪಾಟದಲ್ಲಿ
ಇಸವಿ ಮರೆತು ತುಟಿ ಕಚ್ಚಲ್ವ?

ಲೆಕ್ಕ ಪಕ್ಕ ತಪ್ಪಾಗುತ್ತೆ
ಚಿತ್ರದ ಗೆರೆ ಡೊಂಕಾಗುತ್ತೆ
ಹಾಡೋ ರಾಗ ಕೀರ್‍ಲಾಗುತ್ತೆ
ಎಲ್ಲ ಸರಿ ಮಾಡ್ಕೋತೀವಿ
ನಮ್ಗೂ ಒಂದೊಂದು ಛಾನ್ಸ್ ಕೊಟ್ಬಿಡಿ



- ಇದು ಯಾರನ್ನೂ ಹಂಗಿಸಲು, ಹೀಗೆಳೆಯಲು ಅಲ್ಲ. ಸ್ವಲ್ಪ ಹಾಸ್ಯ ಅಷ್ಟೆ.
- ಮಕ್ಕಳಿಗೂ ಅವಕಾಶ ಕೊಟ್ಟರೆ ತಪ್ಪು ಸರಿ ಮಡಿಕೊಳ್ಳಬಹುದು ಅಲ್ಲವೆ ಅಂತ ಒಂದು ಕೋರಿಕೆಯಷ್ಟೆ.